ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 14-12-1994.

# *ಸಮಯ, ಸಂಕಲ್ಪ, ವಾಣಿಯ ಮೂಲಕ ಸಂಪಾದನೆ ಜಮಾ ಮಾಡಿಕೊಳ್ಳಲು ಅಧಾರ ಮೂರು ಬಿಂದುಗಳನ್ನು ಇಡುವುದು*

(समय–संकल्प–बोल द्वारा कमाई जमा करने का आधार - तीन बिन्दी लगाना)

ಇಂದು ಬಾಪ್‌ದಾದಾರವರು ಯಾರ ಸಭೆಯಲ್ಲಿ ಬಂದಿದ್ದಾರೆ? ಈ ಇಡೀ ಸಭೆಯು ಯಾವ ಆತ್ಮರ ಸಭೆಯಾಗಿದೆ? ಬಾಪ್‌ದಾದಾ ನೋಡುತ್ತಿದ್ದಾರೆ- ಪ್ರತಿಯೊಬ್ಬರೂ ಹೈಯೆಸ್ಟ್(ಶ್ರೇಷ್ಠ, ಉನ್ನತೋನ್ನತ), ರಿಚೆಸ್ಟ್(ಸಿರಿವಂತರು) ಆಗಿದ್ದಾರೆ. ಪ್ರಪಂಚದವರಂತೂ ಹೇಳುತ್ತಾರೆ- ರಿಚೆಸ್ಟ್ ಇನ್ ದಿ ವರ್ಲ್ಡ್. ಅದರೆ ತಾವೆಲ್ಲರೂ ಕಲ್ಪದಲ್ಲಿಯೇ ತಾವು ಶ್ರೇಷ್ಠ ಸಿರಿವಂತರು ಆಗಿದ್ದೀರಿ. ಈ ಸಮಯದಲ್ಲಿ ಜಮಾ ಮಾಡಿರುವ ಖಜಾನೆಯು ಇಡೀ ಕಲ್ಪಕ್ಕಾಗಿ ಜೊತೆ ಬರುತ್ತದೆ. ಈ ಜನ್ಮದಲ್ಲಂತೂ ಸಿರಿವಂತನಾಗಿದ್ದೇನೆ ಆದರೆ ಭವಿಷ್ಯದಲ್ಲಿಯೂ ಅನೇಕ ಜನ್ಮಗಳಲ್ಲಿ ಸಾಹುಕಾರನಿಗಿಂತಲೂ ಸಾಹುಕಾರನಾಗಿ ಇರುತ್ತೇನೆಂದು ಯೋಚಿಸುವವರು ಇಡೀ ಕಲ್ಪದಲ್ಲಿಯೂ ಯಾರೂ ಇರುವುದಿಲ್ಲ. ಮತ್ತು ತಾವೆಲ್ಲರೂ ನಿಶ್ಚಯ ಹಾಗೂ ನಶೆಯಿಂದ ಹೇಳುತ್ತೀರಿ- ನಮ್ಮ ಈ ಖಜಾನೆಯು ಅನೇಕ ಜನ್ಮಗಳು ಜೊತೆಯಲ್ಲಿರುತ್ತದೆ. ಗ್ಯಾರಂಟಿ ಇದೆಯಲ್ಲವೇ? ಹಾಗಾದರೆ ಇಂತಹ ಸಿರಿವಂತರನ್ನು ಇಡೀಕಲ್ಪದಲ್ಲಿ ಯಾರನ್ನಾದರೂ ನೋಡಿದ್ದೀರಾ? ಇಂದು ಬಾಪ್‌ದಾದಾರವರು ತನ್ನ ರಾಜರಿಗೂ ರಾಜ, ಚಕ್ರವರ್ತಿಗೂ ಚಕ್ರವರ್ತಿ ಮಕ್ಕಳನ್ನು ನೋಡುತ್ತಿದ್ದಾರೆ. ಒಂದೊಂದು ದಿನದಲ್ಲಿ ಎಷ್ಟು ಸಂಪಾದನೆಯನ್ನು ಜಮಾ ಮಾಡಿರುವಿರಿ? ಲೆಕ್ಕ ಮಾಡಿರಿ. ಜಮಾದ ಖಾತೆಯು ಎಷ್ಟು ತೀವ್ರಗತಿಯಿಂದ ಹೆಚ್ಚುತ್ತಿದೆ? ಮತ್ತು ವೃದ್ಧಿ ಮಾಡುವ ಸಾಧನವು ಎಷ್ಟೊಂದು ಸಹಜವಿದೆ? ಇದರಲ್ಲೇನಾದರೂ ಕಷ್ಟವೇ? ತಮ್ಮ ಸಂಪಾದನೆ ಅಥವಾ ಜಮಾ ಖಾತೆಯನ್ನು ವೃದ್ಧಿ ಮಾಡಲು ಬಿಂದುವನ್ನಿಡಿ ಮತ್ತು ವೃದ್ಧಿಯಾಗುತ್ತಿರಿ. ಸಹಜ ಸಾಧನವಾಗಿದೆ- ತಾವೂ ಬಿಂದು, ತಂದೆಯವರೂ ಬಿಂದು ಹಾಗೂ ಡ್ರಾಮಾದಲ್ಲಿ ಕಳೆದುಹೋದದಕ್ಕೆ ಬಿಂದುವನ್ನಿಡಿ. ಹಾಗಾದರೆ ಸಂಪಾದನೆಯ ಆಧಾರವಾಗಿದೆ- ಬಿಂದುವನ್ನಿಡುವುದು, ಮತ್ತಾವುದೇ ಚಿಹ್ನೆಯಲ್ಲ. ಏಕೆ, ಏನು, ಹೇಗೆ- ಈ ಪ್ರಶ್ನಾರ್ಥಕ ಚಿಹ್ನೆ, ಆಶ್ಚರ್ಯಸೂಚಕ ಯಾವುದರ ಅವಶ್ಯಕತೆಯಿಲ್ಲ ಏಕೆಂದರೆ ಮಾಸ್ಟರ್ ಜ್ಞಾನಸಾಗರನಾಗಿದ್ದೀರಿ. ಆದ್ದರಿಂದ 'ಹೇಗೆ' ಎಂಬ ಶಬ್ದವು 'ಹೀಗೆ' ಎನ್ನುವುದರಲ್ಲಿ ಬದಲಾಗಿಬಿಟ್ಟಿತು. ಬದಲಾಯಿತೋ ಅಥವಾ ಈಗಲೂ ಹೇಗೆ-ಹೇಗೆ ಎನ್ನುತ್ತೀರಾ? 'ಗೊತ್ತಿಲ್ಲ' ಎಂಬ ಈ ಶಬ್ದವು ಸಂಕಲ್ಪದಲ್ಲಿಯೂ ಬದಲಾಯಿತೇ? ತ್ರಿಕಾಲದರ್ಶಿಯು ಇದನ್ನು ಸ್ವಪ್ನದಲ್ಲಿಯೂ ಯೋಚಿಸಲು ಸಾಧ್ಯವಿಲ್ಲ ಅಂದಮೇಲೆ ಮುಖದಿಂದ ಮಾತನಾಡುವ ಪ್ರಶ್ನೆಯೇ ಇಲ್ಲ. ಸಂಗಮದಲ್ಲಿ ಪೂರ್ಣ ಆಟವೇ ಮೂರು ಬಿಂದುಗಳದಾಗಿದೆ, ಅತ್ಯಂತ ಸಹಜವಾದುದು ಬಿಂದುವೇ ಅಥವಾ ಪ್ರಶ್ನಾರ್ಥಕ ಚಿಹ್ನೆಯೇ? ಬಿಂದು ಸಹಜವಲ್ಲವೇ? ಬಿಂದು ಇಡುವುದರಲ್ಲಿ ಎಷ್ಟು ಸಮಯ ತೆಗೆದುಕೊಳ್ಳುತ್ತದೆ? ಸೆಕೆಂಡಿಗಿಂತಲೂ ಕಡಿಮೆ, ಬಂದುವನ್ನಿಡುವುದು ಬರುತ್ತದೆಯೇ ಅಥವಾ ಲೇಖನಿಯು ಜಾರಿಹೋಗುವುದೇ? ಕೆಲವೊಮ್ಮೆ ಬಿಂದುವಿಗೆ ಬದಲಾಗಿ ಲೇಖನಿಯೂ ಉದ್ದವಾದ ಗೆರೆಯನ್ನೆಳೆಯುತ್ತದೆ. ಬಿಂದು

ಇಡುವುದರಿಂದ ಒಂದು ಸೆಕೆಂಡಿನಲ್ಲಿ ತಮ್ಮ ಎಷ್ಟೊಂದು ಖಜಾನೆಗಳು ಉಳಿತಾಯವಾಗಿಬಿಡುತ್ತದೆ. ಖಜಾನೆಗಳ ಪಟ್ಟಿಯಂತು ಗೊತ್ತಿದೆಯಲ್ಲವೇ? ಒಂದುವೇಳೆ ಬಿಂದುವಿನ ಬದಲು ಮತ್ತಾವುದೇ ಚಿಹ್ನೆಯನ್ನಿಡುತ್ತೀರಿ ಅಥವಾ ಚಿಹ್ನೆಯಾದರೆ ಜ್ಞಾನದ ಖಜಾನೆಯು ವ್ಯರ್ಥವಾಯಿತು, ಶಕ್ತಿಗಳ ಖಜಾನೆಯು ವ್ಯರ್ಥವಾಯಿತು, ಗುಣಗಳ ಖಜಾನೆ, ಸಂಕಲ್ಪದ ಖಜಾನೆಯೂ ಹೋಯಿತು. ಶ್ವಾಸವು ಸಫಲವಾಗುವ ಬದಲು ಅಸಫಲತೆಯಲ್ಲಿ ಹೋಯಿತು, ಎಂದರ್ಥ. ಸಮಯವೂ ವ್ಯರ್ಥವಾಯಿತು! ಎಷ್ಟು ವ್ಯರ್ಥವಾಯಿತು? ಉದ್ದವಾದ ಪಟ್ಟಿಯಾಯಿತಲ್ಲವೇ? ಅಂದಮೇಲೆ ಒಂದೆರಡು ಸೆಕೆಂಡ್ ಅಷ್ಟೇ ಹೋಯಿತಲ್ಲವೆ ಎಂದು ಯೋಚಿಸಬಾರದು ಆದರೆ ಒಂದು ಸೆಕೆಂಡಿನಲ್ಲಿ ಕಳೆದುಕೊಂಡಿದ್ದು ಎಷ್ಟು? ಒಂದು ಸೆಕೆಂಡ್ ಸಹ ಬಹಳ ದೊಡ್ಡದಾಯಿತಲ್ಲವೇ? ಪ್ರತೀ ಸಮಯದಲ್ಲಿ ತಮ್ಮ ಜಮಾದ ಖಾತೆಯನ್ನು ವೃದ್ಧಿ ಮಾಡುತ್ತಾ ಸಾಗಿರಿ. ಸಂಪಾದನೆ ಏನಾಯಿತು ಮತ್ತು ಕಳೆದುಕೊಂಡಿದ್ದೇನು? ಇವೆಲ್ಲಾ ಖಜಾನೆಗಳಲ್ಲಿ ಎಷ್ಟು ಖಜಾನೆಗಳನ್ನು ಕಳೆದಿರಿ? ಬಾಪ್‌ದಾದಾರವರೂ ಸಹ ಮಕ್ಕಳ ಜಮಾದ ಖಾತೆಯನ್ನು ಪರಿಶೀಲಿಸುತ್ತಾ ಇರುತ್ತಾರೆ. ಯಾವಾಗ ಖಾತೆಯನ್ನು ನೋಡುತ್ತಾರೆಯೋ ಆಗ ಮುಗುಳ್ನಗುತ್ತಾ ಇರುತ್ತಾರೆ. ಏನನ್ನು ನೋಡಿ ಮುಗುಳ್ನಗುತ್ತಿರಬಹುದು? ಅಮೃತವೇಳೆ ಮಿಲನವನ್ನೂ ಮಾಡುತ್ತಾರೆ. ವಾರ್ತಾಲಾಪವನ್ನೂ ಮಾಡುತ್ತಾರೆ. ಬಹಳ ಒಳ್ಳೊಳ್ಳೆಯ ಪ್ರತಿಜ್ಞೆಗಳನ್ನೂ ಮಾಡುತ್ತಾರೆ- ನಾವು ಇದನ್ನು ಮಾಡುತ್ತೇವೆ. ಇದನ್ನು ಮಾಡುತ್ತೇವೆ. ಬಹಳ ಒಳ್ಳೊಳ್ಳೆಯ ಮಾತನ್ನಾಡುತ್ತಾರೆ ಆದರೆ ಏನು ಮಾಡುತ್ತಾರೆ? ಒಳ್ಳೆಯ ಮಾತುಗಳನ್ನು ಹೇಳುತ್ತಾರೆ. ನಡೆಯುತ್ತಾ ನಡೆಯುತ್ತಾ ಇಡೀ ದಿನದಲ್ಲಿ ಯಾವುದಾದರೊಂದು ಖಜಾನೆಯನ್ನು ಕಳೆದುಕೊಳ್ಳುತ್ತಾರೆ. ಏನನ್ನು ಆಧಾರವನ್ನಾಗಿ ಮಾಡಿಕೊಳ್ಳುತ್ತಾರೆ? ಬಾಪ್‌ದಾದಾರವರಿಗೂ ಸಹ ತಮ್ಮ ಒಳ್ಳೊಳ್ಳೆಯ ವಿಷಯಗಳನ್ನು ತಿಳಿಸತೊಡಗುತ್ತಾರೆ. ಒಂದುವೇಳೆ ವ್ಯರ್ಥಸಂಕಲ್ಪ ನಡೆಯಿತೆಂದರೆ ಜಮಾ ಆಯಿತೇ ಅಥವಾ ಕಳೆದುಕೊಂಡಂತೆಯೇ? ಹಾಗಾದರೆ ಮತ್ತೇಕೆ ಮಾತನ್ನಾಡುತ್ತೀರಿ? ಕೇವಲ ಸಂಕಲ್ಪ ನಡೆಯಿತಲ್ಲವೆ. ಅದಂತೂ ಸರಿಯಾಗಿಬಿಡುತ್ತದೆ. ತಂದೆಯವರಿಗೂ ತಿಳಿಹೇಳುತ್ತಾರೆ- ಸರಿಯಾಗಿಬಿಡುತ್ತದೆ. ಪುರುಷಾರ್ಥಿ ಅಲ್ಲವೆ, ಸಂಪೂರ್ಣರಂತೂ ಆಗಿಲ್ಲ. ಆಗಿಬಿಡುತ್ತೇವೆ... ಇದಕ್ಕೆ ಬಾಪ್ ದಾದಾರವರು ತಿಳಿಸುತ್ತಾರೆ- ಈ ವೆ..ವೆ... ಹಾಡನ್ನು ಇಡೀ ದಿನದಲ್ಲಿ ಬಹಳ ಆಲಿಸುತ್ತೇವೆ ಆದರೆ ಇದೂ ಸಹ ಎಲ್ಲಿಯವರೆಗೆ? ಅಂತ್ಯದಲ್ಲಿ ಸಂಪೂರ್ಣರಾಗಬೇಕೇ? ಅಥವಾ ಬಹಳ ಕಾಲದ ಅಭ್ಯಾಸದಿಂದ ಬಹಳ ಕಾಲದ ಆಸ್ತಿಯನ್ನು ಪಡೆಯಬೇಕೆ? ಆಸ್ತಿ ಅವಿನಾಶಿಯಾದುದನ್ನೇ ಬಯಸುತ್ತೀರಾ? ಸಂಪೂರ್ಣ ಆಸ್ತಿ ಬಯಸುತ್ತೀರಾ ಅಥವಾ ಅರ್ಧವಾದರೂ ಪರವಾಗಿಲ್ಲವೇ? ಮತ್ತು ಪುರುಷಾರ್ಥದಲ್ಲಿ ಅರ್ಧವಷ್ಟೇ ಪುರುಷಾರ್ಥ ನಡೆಯುವುದೇ? ಹಾಗಾದರೆ ಪುರುಷಾರ್ಥದ ಸಮಯದಲ್ಲಿ ಮಾಡುತ್ತೇವೆ. ನೋಡುತ್ತೇವೆ. ಆಗುತ್ತೇವೆ. ಮಾಡಿಬಿಡುತ್ತೇವೆ. ಆಗಿಬಿಡುತ್ತದೆ.... ಇದನ್ನೇ ಯೋಚಿಸುತ್ತೀರಾ ಮತ್ತು ಪ್ರಾಪ್ತಿಯ ಸಮಯದಲ್ಲಿ ವೆ.. ವೆ.. ಮಾಡುವಿರಾ? ಅದರಲ್ಲಂತು ಸಂಪೂರ್ಣ ಪ್ರಾಪ್ತಿಯಾಗಬೇಕು, ಸಂಪೂರ್ಣ ಆಸ್ತಿ ಬೇಕು. ಎಲ್ಲರೂ ಲಕ್ಷ್ಮೀ - ನಾರಾಯಣ ಆಗಲು ಕೈ ಮೇಲೆತ್ತುತ್ತೀರಿ. ಲಕ್ಷ್ಮೀ-ನಾರಾಯಣರದೂ ಆ ಸಿಂಹಾಸನಗಳು ನಡೆಯುತ್ತವೆ ಎನ್ನುವುದೂ ಗೊತ್ತಿದೆ ಆದರೂ ಲಕ್ಷ್ಮೀ-ನಾರಾಯಣ ಆಗುವುದರಲ್ಲಿ ಕೈ ಎತ್ತುವಿರಲ್ಲವೇ? ಹಾಗಾದರೆ ಲಕ್ಷ್ಮೀ-ನಾರಾಯಣನ ಅರ್ಥವೇ ಆಗಿದೆ- ನಂಬರ್‌ವನ್, ಪಾಸ್-ವಿತ್-ಆನರ್ ಆಗುವುದು. ಬಾಪ್‌ದಾದಾರವರು ಮಕ್ಕಳ ಸಾಹಸವನ್ನು ನೋಡಿ ಅವಶ್ಯವಾಗಿ ಖುಷಿಯಾಗುವರು. ರಾಮ-ಸೀತೆಯಾಗುವುದರಲ್ಲಿ ಕೈಯೆತ್ತಿಸುವುದಿಲ್ಲ. ಒಳ್ಳೆಯ ಸಾಹಸವಿದೆ ಮತ್ತು ಸಾಹಸವಂತರಿಗೆ ಸಹಯೋಗವೂ ಸಿಗುತ್ತದೆ.

ಕೇವಲ ಪುರುಷಾರ್ಥದ ಸಮಯದಲ್ಲಿ ಹೇಗೆ ಸಂಕಲ್ಪವನ್ನು ತಂದೆಯ ಮುಂದೆ ಮಾಡುತ್ತೀರಿ ಹಾಗೆಯೇ ಇದನ್ನು ಮಾತು ಮತ್ತು ಕರ್ಮದಲ್ಲಿ ತನ್ನಿರಿ. ಬಾಪ್‌ದಾದಾರವರು ನೋಡಿದರು- ಸಮಯದ ಖಜಾನೆಯ ಮಹತ್ವವನ್ನೆಷ್ಟು ಇಡಬೇಕೋ ಅಷ್ಟು ಹಲವು ಮಕ್ಕಳು ಇಡುವುದಿಲ್ಲ. ಒಂದು ದಿನವಾದರೂ ದಿನಚರಿಯ ಪರಿಶೀಲನೆ ಮಾಡಿದರೆ, ಮೆಜಾರಿಟಿಯ ಸಮಯವು ವ್ಯರ್ಥದ ಖಾತೆಯಲ್ಲಿ ಹೋಗುತ್ತಿರುವುದು ಕಂಡುಬರುತ್ತದೆ. ದ್ವಾಪರದ ಕಾಲದಿಂದ ವ್ಯರ್ಥ ಆಲಿಸುವ, ನೋಡುವ ಮತ್ತು ಯೋಚಿಸುವ ಹವ್ಯಾಸವನ್ನು ಬಯಸದಿದ್ದರೂ ಆಕರ್ಷಿಸುತ್ತದೆ ಮತ್ತು ಇದೇ ಕಾರಣದಿಂದ ಸಮಯದ ಖಜಾನೆಯು ವ್ಯರ್ಥದ ಖಾತೆಯಲ್ಲಿ ಹೊರಟುಹೋಗುತ್ತದೆ. ಈ ಹಿಂದೆಯೂ ತಿಳಿಸಿದ್ದೇವೆ-ಸೆಕೆಂಡಿಗೂ ಎಷ್ಟೊಂದು ಮಹತ್ವವಿದೆ! ಇನ್ನೊಂದು ಮಾತು- ಮೆಜಾರಿಟಿ ವ್ಯರ್ಥ ಮಾತಿನಲ್ಲಿಯೂ ಸಮಯವನ್ನು ವ್ಯರ್ಥ ಮಾಡುತ್ತಾರೆ. ಒಂದು ಗಂಟೆಯಲ್ಲಿಯೂ ಪರಿಶೀಲನೆ ಮಾಡಿರಿ- ಯಾವುದೇ ಮಾತನ್ನು ಮಾತನಾಡಿದಿರಿ, ಪ್ರತೀ ಮಾತಿನಲ್ಲಿ ಆತ್ಮಿಕ ಭಾವ ಮತ್ತು ಶುಭ ಭಾವನೆಯಿದೆಯೇ? ಮಾತಿನಿಂದ ಭಾವ-ಭಾವನೆಯೆರಡೂ ಅನುಭವವಾಗುವುದು. ಒಂದುವೇಳೆ ಪ್ರತೀ ಮಾತಿನಲ್ಲಿ ಶುಭ ಭಾವನೆ, ಶ್ರೇಷ್ಠ ಭಾವನೆ ಇಲ್ಲದಿದ್ದರೆ ಅವಶ್ಯವಾಗಿ ಮಾಯೆಯ ಭಾವನೆಯಿದೆ. ಅವುಗಳಂತು ಹಲವಾರು ಇದೆ. ಈರ್ಷೆ, ದ್ವೇಷ, ತಿರಸ್ಕಾರ, ಈ ಭಾವನೆಗಳು ಭಲೆ ಎಷ್ಟೇ ಶೇಕಡಾವಾರು ಸಮಾವೇಶವಾಗಿರಬಹುದು. ಕೆಲವೊಮ್ಮೆ ಮಾತುಗಳ ಟೇಪ್ ರೆಕಾರ್ಡ್ ಬಾಪ್‌ದಾದಾರವರು ಆಲಿಸುತ್ತಾರೆ. ಪ್ರತಿಯೊಬ್ಬರಲ್ಲಿ ಸ್ವತಹವಾಗಿ ಟೇಪ್ ತುಂಬಿಬಿಡುತ್ತದೆ ಮತ್ತು ಯಾವ ಗಳಿಗೆಯಲ್ಲಿ ಯಾರೇ ಕೇಳಬೇಕೆಂದರೂ ಅವರು ಕೇಳಬಹುದು. ಪ್ರತೀ ಮಾತಿನಲ್ಲಿ ಸಾರವಿರುವುದಿಲ್ಲ. ಕೆಲವೊಮ್ಮೆ ಇದನ್ನೂ ಹೇಳುತ್ತಾರೆ- ನನ್ನ ಭಾವನೆ, ನನ್ನ ಭಾವ ಕೆಟ್ಟದ್ದಿರಲಿಲ್ಲ, ಹಾಗೆಯೇ ಬಂದುಬಿಟ್ಟಿತು ಅಥವಾ ಮಾತನಾಡಿಬಿಟ್ಟೆನು. ಆದರೆ ಯಾವ ಮಾತಿನಲ್ಲಿ ಆತ್ಮಿಕ ಭಾವ ಮತ್ತು ಶುಭ ಭಾವನೆಯಿಲ್ಲವೋ ಅದು ಯಾವ ಖಾತೆಯಲ್ಲಿ ಜಮಾ ಆಗುವುದು? ವ್ಯರ್ಥದ ಖಾತೆಯಲ್ಲಿ ಅಲ್ಲವೇ? ಹಾಗಾದರೆ ಸಂಪಾದನೆಯ ಖಾತೆಯು ಹೆಚ್ಚಾಗುತ್ತಿದೆಯೇ ಅಥವಾ ಖರ್ಚಿನ ಖಾತೆಯು ಹೆಚ್ಚಾಗಿದೆಯೇ? ಹೀಗಾದರೆ ಕಳೆದುಕೊಂಡಂತೆ ಅಲ್ಲವೇ? ಹಾಗಾದರೆ ಮಾತಿನಲ್ಲಿಯೂ ವ್ಯರ್ಥದ ಖಾತೆ ಹೆಚ್ಚಾಗಿರುತ್ತದೆ ಆದ್ದರಿಂದ ಮಾತನ್ನೂ ಪರಿಶೀಲಿಸಿರಿ. ಹಾಗೆಯೇ ಮಾತನಾಡಿಬಿಟ್ಟೆನು ಎಂದು ಹೇಳುತ್ತಾರೆ. ಆದ್ದರಿಂದ ಹಾಗೆ ಮಾತನಾಡಿಬಿಟ್ಟೆ ಎಂಬ ಭಾಷೆಯನ್ನು ಪರಿವರ್ತನೆ ಮಾಡಿಕೊಳ್ಳಿರಿ . ಸಮರ್ಥ ಮಾತುಗಳು ಅರ್ಥಾತ್ ಆ ಮಾತಿನಲ್ಲಿ ಯಾವ ಆತ್ಮನಿಗಾದರೂ ಪ್ರಾಪ್ತಿಯ ಭಾವ ಅಥವಾ ಸಾರವು ಇರಬೇಕು. ಒಂದು ವೇಳೆ ಸಾರವಿಲ್ಲ ಎಂದರೆ ಜಮಾ ಖಾತೆ ಇಲ್ಲದಂತೆ ಅಲ್ಲವೇ. ಬಾಪ್ ದಾದಾರವರು ನೋಡಿದರು- ಒಂದು ದಿನದಲ್ಲೆಷ್ಟು ಜಮಾ ಮಾಡಬಹುದೋ ಅಷ್ಟು ಇಲ್ಲ. ಹಾಗಾದರೆ ಏನು ಮಾಡಬೇಕಾಗುತ್ತದೆ? ಲಕ್ಷ್ಮೀ-ನಾರಾಯಣರಂತೂ ಆಗಲೇಬೇಕಲ್ಲವೇ? ಅಥವಾ ಆಗದಿದ್ದರೆ ಪರವಾಗಿಲ್ಲವೇ! ಮೊದಲ ಜನ್ಮದಿಂದಲೂ ಶ್ರೇಷ್ಠ ಪ್ರಾಲಬ್ಧ ಪಡೆಯಬೇಕಾ ಅಥವಾ ಎರಡು-ಮೂರನೇ ಜನ್ಮದಿಂದ ಆರಂಭ ಮಾಡುವಿರಾ? ಮೊದಲ ಜನ್ಮದಲ್ಲಿ ಬರದೇ, ಎರಡು-ಮೂರನೇ ಜನ್ಮದಲ್ಲಿ ಬರುವುದು ಒಪ್ಪಿಗೆಯೇ? ಇಷ್ಟವಿಲ್ಲವೇ? ಹಾಗಾದರೆ ಇಷ್ಟು ಜಮಾದ ಖಾತೆಯಿದೆಯೇ? ಒಂದುವೇಳೆ ಖಾತೆಯಲ್ಲಿ ಜಮಾ ಕಡಿಮೆಯಾಗಿದ್ದರೆ ಪ್ರಾಲಬ್ಧವನ್ನೇನು ಅನುಭವಿಸುವಿರಿ? ಎಷ್ಟು ಜಮಾ ಮಾಡಿರುವಿರೋ ಅಷ್ಟೇ ಅನುಭವಿಸುತ್ತೀರಿ. ಆದ್ದರಿಂದ ಇಂದು ಬಾಪ್‌ದಾದಾರವರು ಎಲ್ಲರ ಜಮಾ ಆಗಿರುವ ಖಾತೆಯನ್ನು ನೋಡಿದರು. ಅನ್ಯರಿಗೆ ಸಮಯದ ಮಹತ್ವವನ್ನು ಬಹಳ ಚೆನ್ನಾಗಿ ತಿಳಿಸುತ್ತೀರಿ. ಸಂಗಮಯುಗದ ಮಹಿಮೆಯನ್ನು ಎಷ್ಟೊಂದು ಚೆನ್ನಾಗಿ ಮಾಡುತ್ತೀರಿ! ಅದೇರೀತಿ ತಾವೂ ಸಹ ತಮ್ಮ ಮುಂದೆ ಸಮಯದ

ಮಹತ್ವವನ್ನಿಟ್ಟುಕೊಳ್ಳಿ. ಸಮಯಕ್ಕೆ ಮೊದಲು ತಮ್ಮ ಶ್ರೇಷ್ಠ ಭಾಗ್ಯದ ಆಧಾರದಿಂದ ಪ್ರಾಪ್ತಿಗಳ ಫುಲ್ ಖಾತೆಯನ್ನು ಜಮಾ ಮಾಡಿಕೊಳ್ಳಿರಿ.

ಸಂಗಮಯುಗದ ಸಮಯದ ವಿಶೇಷತೆಯಾಗಿದೆ- ಮೂರು ರೂಪಗಳ ಪ್ರಾಪ್ತಿಯಾಗುವುದು. 1.ವಾರಸತ್ವದ(ಆಸ್ತಿ) ರೂಪದಲ್ಲಿ. 2.ವಿದ್ಯೆಯನ್ನು ಆದಾಯದ ಮೂಲ ಎಂದು ಹೇಳುತ್ತಾರೆ. ಅಂದಾಗ ವಿದ್ಯೆಯ ಪ್ರಾಪ್ತಿಯ ಆಧಾರದಿಂದ ಹಾಗೂ 3.ವರದಾನದ ರೂಪದಲ್ಲಿ. ವಾರಸತ್ವವೂ ಇದೆ. ಆದಾಯವೂ ಇದೆ ಮತ್ತು ವರದಾನವೂ ಇದೆ. ಪ್ರಾಪ್ತಿಯೂ ಬಹಳ ಶ್ರೇಷ್ಠವಾದುದು ಆಗಿದೆ! ಅದನ್ನು ಕೇವಲ ಸಂಭಾಲಿಸುವವರು ಆಗಿರಿ. ವಾರಸತ್ವವೂ ಬೇಹದ್ದಿನದು. ಆದಾಯವೂ ಬೇಹದ್ದಿನದು ಮತ್ತು ವರದಾನವೂ ಬೇಹದ್ದಿನದಾಗಿದೆ. ಪ್ರತಿನಿತ್ಯವೂ ಭಗವಂತನ ವರದಾನವು ಸಿಗುತ್ತದೆಯೆಂದು ಯೋಚಿಸಿದ್ದೀರಾ? ಇಷ್ಟೊಂದು ವರದಾನಗಳು ಯಾರಿಗಾದರೂ. ಎಂದಾದರೂ ಸಿಗಲು ಸಾಧ್ಯವೇ! ಆದರೆ ತಾವಂತು ಹೇಳುತ್ತೀರಿ- ನಮ್ಮ ಅಧಿಕಾರವಂತು ಇದೆ. ಆಸ್ತಿಯೂ, ವಿದ್ಯೆಯೂ ಹಾಗೂ ವರದಾನಗಳ ಮೇಲೂ ಅಧಿಕಾರವಿದೆ. ಇದು ಚಿಕ್ಕ ಮಾತಲ್ಲ ಬಹಳ ಶ್ರೇಷ್ಠವಾದುದು! ಮೂರೂ ಸಂಬಂಧಗಳಿಂದ ಮೂರೂ ರೂಪಗಳ ಮೇಲೆ ತಮ್ಮ ಅಧಿಕಾರವನ್ನು ಪ್ರಾಪ್ತಿ ಮಾಡಿಕೊಂಡಿದ್ದೀರಲ್ಲವೇ? ಎಲ್ಲರೂ ನಶೆಯಿಂದ 'ತಂದೆಯು ನನ್ನವರು' ಎಂದು ಹೇಳುತ್ತೀರಲ್ಲವೇ. ಇದನ್ನೇ ಹೇಳುತ್ತೀರಾ ಅಥವಾ ನನ್ನವರಲ್ಲ. ನಿನ್ನವರಾಗಿದ್ದಾರೆ ಎನ್ನುವಿರಾ? ನಮಗಾಗಿ ತಂದೆಯು ಓದಿಸುವುದಕ್ಕಾಗಿ ಬರುತ್ತಾರೆ- ಇದನ್ನಂತೂ ತಿಳಿದಿದ್ದೀರಲ್ಲವೇ? ಹಾಗಾದರೆ ವಿದ್ಯಾಭ್ಯಾಸದ ಮೇಲೆ ಅಧಿಕಾರವಿದೆಯಲ್ಲವೇ? ಮತ್ತು ವರದಾತನ ಬಳಿ ವರದಾನವೇ ಇರುತ್ತದೆ. ಯಾರಿಗಾಗಿ? ಪ್ರತಿಯೊಬ್ಬರೂ ಯೋಚಿಸುತ್ತಾರೆ- ನನಗಾಗಿಯೇ ವರದಾತಾ ತಂದೆಯಿದ್ದಾರೆ. ಹಾಗಾದರೆ ಮೂರರ ಮೇಲೆ ಅಧಿಕಾರವಿದೆ. ಹೇಳುವುದರಲ್ಲಂತು ಬಹಳ ಸಾಧಾರಣವಾಗಿದೆ ಆದ್ದರಿಂದಲೇ ಇವರು ಇರುವುದು ನೋಡಿದರೆ ಹೀಗಿದೆ ಮತ್ತು ಹೇಳುತ್ತಿರುವುದೇನು? ಎಂದು ಪ್ರಪಂಚದವರು ನಗುವರು. ಆದ್ದರಿಂದ ಅಧಿಕಾರವನ್ನು ಸದಾ ಸ್ಮೃತಿಯಲ್ಲಿ ಇಟ್ಟುಕೊಂಡು ಹೆಜ್ಜೆಯನ್ನಿಡಿ. ಸ್ಮೃತಿ ಸ್ವರೂಪದಲ್ಲಿಟ್ಟುಕೊಳ್ಳಿರಿ. ವಿಸ್ಮೃತಿ ರೂಪದಲ್ಲಿ ಅಲ್ಲ. ನಾವಂತೂ  ಬ್ರಹ್ಮಾಕುಮಾರರಾಗಿದ್ದೇವೆ. ಬಾಬಾರವರ ಮಕ್ಕಳೇ ಆಗಿದ್ದೇವೆ ಅಲ್ಲವೆ.. ಹೀಗಲ್ಲ ಪ್ರತ್ಯಕ್ಷ ರೂಪದಲ್ಲಿ, ಮನಸ್ಸಿನಲ್ಲಿ, ಬುದ್ಧಿಯಲ್ಲಿ. ಕರ್ಮದಲ್ಲಿ ಸ್ಮೃತಿಯಲ್ಲಿಟ್ಟುಕೊಳ್ಳಿರಿ. ಮನಸ್ಸಿನಲ್ಲಿ ಈ ಸಂಕಲ್ಪ ಸ್ಮೃತಿಯಲ್ಲಿರಬೇಕು- ನಾನೇನು ಆಗಿದ್ದೇನೆ, ಬುದ್ಧಿಯಲ್ಲಿ ಸ್ಮೃತಿ ಸ್ವರೂಪದಲ್ಲಿರಲಿ ಮತ್ತು ಕರ್ಮದಲ್ಲಿ ಅಧಿಕಾರಿಯ ನಿಶ್ಚಯ ಹಾಗೂ ನಶೆಯಿಂದ ಪ್ರತೀ ಕರ್ಮವಾಗಲಿ, ಅಮೃತವೇಳೆ ಪ್ರತ್ಯಕ್ಷ ಸ್ವರೂಪದಲ್ಲಿದ್ದು ದಿನವಿಡೀ ಗುಪ್ತವಾಗಬಾರದು ಸದಾ ಪ್ರತ್ಯಕ್ಷವಾಗಿರಬೇಕು. ಇದರಿಂದ ಜಮಾದ ಖಾತೆಯನ್ನು ವೃದ್ಧಿಪಡಿಸಿರಿ. ತೀವ್ರಗತಿಯಿಂದ ವೃದ್ಧಿ ಮಾಡಿರಿ. ನಿಧಾನವಾಗಿ  ಮಾಡಬಾರದು ಏಕೆಂದರೆ ಸಮಯವು ತಾವು ಮಾಸ್ಟರ್ ರಚಯಿತನಿಗಾಗಿ ನಿಂತಿದೆ. ಈಗಲೂ ಪ್ರಕೃತಿಗೆ ಆದೇಶ ಮಾಡಿದರೆ ಏನು ಮಾಡಲು ಸಾಧ್ಯವಿಲ್ಲ ಹೇಳಿ? ಒಂದುವೇಳೆ ಐದು ತತ್ವಗಳೇ ಏರುಪೇರು ಮಾಡುವುದನ್ನು ಪ್ರಾರಂಭಿಸಿದರೆ ಏನಾಗುವುದಿಲ್ಲ! ಮತ್ತು ಎಷ್ಟು ಸಮಯದಲ್ಲಾಗುತ್ತದೆ? ಅಂದರೆ ಸಮಯ, ಪ್ರಕೃತಿ ಹಾಗೂ ಮಾಯೆಯು ಬೀಳ್ಕೊಡುಗೆಗಾಗಿ ನಿರೀಕ್ಷಿಸುತ್ತಿದೆ. ತಾವು ಸಂಪೂರ್ಣತೆಯ ಶುಭಾಷಯಗಳನ್ನು ಆಚರಿಸಿದಾಗ ಅದು ಬೀಳ್ಕೊಡುಗೆ ಪಡೆದು ಹೋಗಿಬಿಡುತ್ತದೆ. ಮಾಯೆಯೂ ನೋಡುತ್ತದೆ- ಈಗ ಇವರಿನ್ನೂ ತಯಾರಿಲ್ಲ ಎಂದು ಅವಕಾಶ ತೆಗೆದುಕೊಳ್ಳುತ್ತಾ ಇರುತ್ತದೆ. ಪ್ರಕೃತಿಗೆ ಆದೇಶ

ಕೊಡುವುದೇ? ಪುರುಷನು(ಆತ್ಮ) ತಯಾರಾಗಿದೆಯೇ? ಪ್ರಕೃತಿಯಂತೂ ತಯಾರಾಗಿಬಿಡುತ್ತದೆ. ಆದೇಶ ಕೊಡುವುದೇ? ಅಥವಾ ಜ್ಞಾನ ಸರೋವರ ತಯಾರಾದ ನಂತರ ಆದೇಶ ಕೊಡುವುದೇ? ಈ ರೀತಿ. ಎವರೆಡಿ ಇದ್ದೀರಾ ಅಥವಾ ರೆಡಿ ಆಗಿದ್ದೀರಾ? ಶಕ್ತಿಯರು ಎವರೆಡಿ ಇದ್ದೀರಾ? ಸಂಪೂರ್ಣರಾಗಿದ್ದೀರಾ? ಸ್ವಲ್ಪ ತಯಾರಾದರೆ ಎವರೆಡಿ ಎಂದು ಹೇಳುವುದಿಲ್ಲ ಅಲ್ಲವೇ? ಇದನ್ನೂ ಯೋಚಿಸಿ ಅಥವಾ ಪರಿಶೀಲಿಸಿಕೊಳ್ಳಿರಿ ನಾನೇನು ಆಗುವೆನು? ಎಲ್ಲರ ಬಳಿ ಜ್ಞಾನವೆಂಬ ದರ್ಪಣ(ಕನ್ನಡಿ) ಇದೆಯಲ್ಲವೆ? ಚೂರಾಗಿಲ್ಲವಲ್ಲವೇ? ಸ್ಪಷ್ಟವಾಗಿದೆ ಅಲ್ಲವೇ? ಹಾಗಾದರೆ ತಮ್ಮ ಅದೃಷ್ಟದ ಚಹರೆಯನ್ನು ಜ್ಞಾನವೆಂಬ ದರ್ಪಣದಲ್ಲಿ ನಾನು ಯಾವ ರೀತಿ ಆಗುತ್ತೇನೆ ಎಂಬ ನಿಮ್ಮ ಚಿತ್ರವನ್ನು ನೋಡಿಕೊಳ್ಳಿರಿ. ಬ್ರಹ್ಮ ತಂದೆಗೆ ಎಷ್ಟು ಸಮಯ ಹಿಡಿಸುತ್ತದೆ! ಬ್ರಹ್ಮ ತನ್ನ ಸಂಕಲ್ಪದಿಂದ ಸೃಷ್ಟಿಯನ್ನು ರಚಿಸಿದರು ಎಂಬ ಬ್ರಹ್ಮಾ ತಂದೆಯ ಮಹಿಮೆ ಇದೆಯಲ್ಲವೇ. ಹಾಗಾದರೆ ಸಂಕಲ್ಪದಿಂದ ವಿನಾಶವಾಗುವುದಿಲ್ಲವೇ? ತಂದೆಗೆ ತಿಳಿದಿದೆ ರಾಜಧಾನಿ ತಯಾರಾಗುತ್ತಿದೆ, ಆ ರಾಜಧಾನಿಯಲ್ಲಿ ಬ್ರಹ್ಮ ಒಬ್ಬರೇ ಏನು ಮಾಡುತ್ತಾರೆ ಬ್ರಹ್ಮನೊಂದಿಗೆ ಇರುವವರೂ ಬೇಕಲ್ಲವೇ? ಆದ್ದರಿಂದ ಬ್ರಹ್ಮಾ ಬಾಬಾ ಕೂಡ ತನ್ನ ಜೊತೆ ಇರುವವರಿಗಾಗಿ ಕಾದಿದ್ದಾರೆ. ತಂದೆಯು ಮಕ್ಕಳನ್ನು ಪ್ರಶ್ನಿಸುತ್ತಾರೆ. ಮಕ್ಕಳು ತಂದೆಯನ್ನು ಬಹಳಷ್ಟು ಪ್ರಶ್ನೆಗಳನ್ನು ಕೇಳಿಬಿಟ್ಟಿದ್ದಾರೆ. ಈಗ ತಂದೆಯು ಮಕ್ಕಳನ್ನು ಪ್ರಶ್ನಿಸುತ್ತಿದ್ದಾರೆ- ದಿನಾಂಕ ನಿಗಧಿಪಡಿಸಿರಿ ಎಂದು. ಎಲ್ಲರ ಕಾರ್ಯಗಳ ದಿನಾಂಕವನ್ನು ನಿಗಧಿ ಪಡಿಸಿದ್ದೀರಲ್ಲವೆ? ಹಾಗಾದರೆ ಇದರ ದಿನಾಂಕವನ್ನೂ ನಿಗಧಿ ಮಾಡಿರಿ, ಇದರ ಮಹೂರ್ತವೂ ಇರಬೇಕಲ್ಲವೇ. ಜ್ಞಾನ ಸರೋವರದ ದಿನಾಂಕ ನಿಗಧಿಯಾಗಿದೆ. ಆಸ್ಪತ್ರೆಯ ದಿನಾಂಕವೂ ನಿಗಧಿಯಾಗಿದೆ. ಇದರ ದಿನಾಂಕವೇನಾಗಿದೆ? ಇದನ್ನು ಯಾರು ನಿಗಧಿ ಪಡಿಸಬೇಕು? ತಂದೆಯವರಲ್ಲ. ತಂದೆಯವರು ಮಕ್ಕಳ ಕೈಗೆ ಕೊಟ್ಟಿದ್ದಾರೆ. ಯಾವ ಕಾರ್ಯವನ್ನಾದರೂ ನೀವು ಮಾಡುತ್ತೀರಾ ಅಥವಾ ಎಲ್ಲವೂ ತಂದೆಯೇ ಮಾಡಬೇಕೇ? ದಿನಾಂಕ ನಿಗಧಿಪಡಿಸುವ ಕಾರ್ಯಕ್ರಮ ಮಾಡಬೇಕಾಗಿದೆ. ಒಳ್ಳೆಯದು-

(ಹೊಸ ಮಕ್ಕಳನ್ನು ನೋಡುತ್ತಾ) ನೋಡಿ, ಹೊಸ-ಹೊಸ ಮಕ್ಕಳು ಬಂದಿದ್ದೀರಿ, ತಮ್ಮೊಂದಿಗೆ ಎಲ್ಲರಿಗೂ ಎಷ್ಟು ಪ್ರೀತಿಯಿದೆ? ಮೊದಲ ಅವಕಾಶ ತಮ್ಮೆಲ್ಲರಿಗೂ ಕೊಡುತ್ತಾರೆ. ಎಲ್ಲರೂ ಖುಷಿಯಾಗಿರುವವರೇ? ಎಷ್ಟು ಹೆಜ್ಜೆಯಷ್ಟು ಪೃಥ್ವಿ ಸಿಕ್ಕಿದೆ? ಎರಡು ಹೆಜ್ಜೆಯಷ್ಟೇ ಅಥವಾ ಮೂರು ಹೆಜ್ಜೆಯೇ? (ಎರಡು ಹೆಜ್ಜೆ) ಎರಡು ಹೆಜ್ಜೆಯಲ್ಲಿಯೂ ಖುಷಿಯಂತು ಆಗಿದ್ದೀರಿ, ಕಷ್ಟವಿಲ್ಲ ಅಲ್ಲವೇ? ಆಹಾರ-ಪಾನೀಯವಂತೂ ಚೆನ್ನಾಗಿ ಸಿಗುತ್ತಿದೆಯಲ್ಲವೇ? ಮೇಳದಲ್ಲಿ ಮತ್ತಾರಿಗೂ ಇಂತಹ ಪಾಲನೆ ಸಿಗಲು ಸಾಧ್ಯವಿಲ್ಲ. ಮೇಳವನ್ನು ನೋಡಿದ್ದೀರಲ್ಲವೇ? ಇಂತಹ ಬ್ರಹ್ಮಾಭೋಜನ, ಇಂಥಹ ಪರಮಾತ್ಮನ ಪರಿವಾರ ಎಲ್ಲಿ ಸಿಗುತ್ತದೆ? ಚಳಿಯೆನಿಸುತ್ತದೆಯೇ? ಋತುವೂ ಸಹ ಮಧುರವಾಗಿರುತ್ತದೆ. ಈ ಚಳಿಗಾಲವೂ ಸಹ ಮಧುರವೆನಿಸುತ್ತದೆ. ಇದರ ಸೇವನೆ ಮಾಡಬೇಕಲ್ಲವೇ? ಎಲ್ಲರಿಗೂ ಶಾಲುಗಳ ಉಡುಗೊರೆಯಂತು ಸಿಗುತ್ತದೆ ಅಲ್ಲವೇ? ಯಾವುದೇ ಮೇಳಗಳಲ್ಲಿ ಇಂತಹ ಉಡುಗೊರೆ ಸಿಗುತ್ತದೆಯೇ ಅಥವಾ ಖಾಲಿಯಾಗಿ ಬರುತ್ತಾರೆಯೇ? ಒಳ್ಳೆಯದು- ಹೊಸಬರ ಹೃದಯ ತೃಪ್ತಿಯಾಯಿತು, ಮಧುಬನ ನೋಡಿದಿರಾ? ಮುಂಚೆ ಸ್ವಪ್ನದಲ್ಲಿತ್ತು. ಈಗ ಸಾಕಾರವಾಯಿತು. ಸ್ಥಾನವನ್ನೆಷ್ಟಾದರೂ ವಿಸ್ತಾರ ಮಾಡಬಹುದು ಆದರೆ ಕಡಿಮೆ ಆಗಲೇಬೇಕು ಏಕೆ? ಯೋಚನೆ ಮಾಡಿರಿ. ಈಗ 9 ಲಕ್ಷದಷ್ಟು ಜಮಾ ಆಗಿದ್ದಾರೆಯೇ? ಮೊದಲ ಜನ್ಮದ ಸಂಖ್ಯೆಯೇ ತಯಾರಾಗಿಲ್ಲ, ಅದಂತು ಆಗಲೇಬೇಕು ಅಲ್ಲವೇ? ಮನೆಗಳನ್ನೆಷ್ಟು ನಿರ್ಮಾಣ ಮಾಡುವಿರಿ?

ಎಷ್ಟು ಜ್ಞಾನ ಸರೋವರಗಳ ನಿರ್ಮಾಣ ಮಾಡುವಿರಿ? ಎಲ್ಲರೂ ಹೇಳುತ್ತಾರೆ- ಸಂಖ್ಯೆಯನ್ನು ಹೆಚ್ಚಿಸಿರಿ. ಎಷ್ಟು ಸಂಖ್ಯೆಯು ಹೆಚ್ಚಾಗುತ್ತದೆಯೋ ಅಷ್ಟೇ ಮುಂದಿನ ವರ್ಷದಲ್ಲಿ ಮತ್ತಷ್ಟು ಆಗಿಬಿಡುವರು, ಆಗ ಏನು ಮಾಡುವಿರಿ? ಎಷ್ಟು ಮೇಳ ಆಗುವುದೋ ಅದರಲ್ಲಿಯೇ ಖುಷಿಯಾಗಿರಿ. ಮೇಳವನ್ನೂ ಆಚರಿಸಬೇಕಲ್ಲವೇ? (ತಲಹಟಿಯಲ್ಲಿ ಬ್ರಾಹ್ಮಣರ ವಿಶಾಲ ಸಂಘಟನೆ ಆಗುವುದಿದೆ) ಇವರಂತು ಮೇಳದಲ್ಲಿ ಬರುವುದಿಲ್ಲ. ಇವರಂತು ಬಂದುಬಿಟ್ಟರು. ಅನ್ಯರಿಗಾಗಿಯೂ ಇಷ್ಟು ದೊಡ್ಡ ಮೇಳ ಒಪ್ಪಿಗೆಯೇ? 10 ಸಾವಿರ ಮಂದಿ ಮಲಗುವಿರಾ! ಗುಂಪಾಗಿಬಿಡುವುದಿಲ್ಲವೇ? ನಮಗಂತು ಅವಕಾಶವೇ ಸಿಗುವುದಿಲ್ಲ ಎಂದು ತಿಳಿಯುತ್ತೀರಿ, ನಿರೀಕ್ಷೆಯ ಗಳಿಗೆಗಳು ಬಹಳ ಪ್ರಿಯವಾಗಿರುತ್ತದೆ. ಒಂದು ವರ್ಷದ ನಂತರ ಹೋಗಬೇಕೆಂದು ನಿರೀಕ್ಷೆ ಇರುತ್ತದೆಯಲ್ಲವೇ? ಈ ನಿರೀಕ್ಷೆಯಲ್ಲಿ ಪುರುಷಾರ್ಥವು ಬಹಳ ಚೆನ್ನಾಗಿ ನಡೆಯುತ್ತದೆ! ಮತ್ತು ಯಾವಾಗ ಪುರುಷಾರ್ಥ ಮಾಡಿ ಹೋಗುತ್ತೀರೋ ಆಗ ನೋಡಿಬಿಡುತ್ತೀರಿ, ಮತ್ತೇನಾಗುವುದು? ನಂತರ ಹುಡುಗಾಟಿಕೆ ಬರುತ್ತದೆಯೇ? ಬರುವುದಿಲ್ಲವೇ? ಇನ್ನೂ ಮುಂದುವರೆಯುವಿರಾ? ಇದೂ ಸಹ ಡ್ರಾಮಾದಲ್ಲಿ ಯಾವ ವಿಧಿಯನ್ನು ಮಾಡಲ್ಪಟ್ಟಿದೆಯೋ ಅದು ಬಹಳಷ್ಟು ಲಾಭದಾಯಕ ಆಗಿದೆ. ಒಂದು ವರ್ಷದಲ್ಲಿ ಪರಿಪಕ್ವ ಆಗಿಬಿಡುತ್ತೀರಲ್ಲವೇ? ಇಲ್ಲದಿದ್ದರೆ ಕಚ್ಚಾ-ಕಚ್ಚಾ ಬಂದುಬಿಡುತ್ತೀರಿ ನಂತರ ಯುದ್ಧ ಮಾಡಬೇಕಾಗುತ್ತದೆ. ಪ್ರತೀ ವರ್ಷದಲ್ಲಿ ತಮ್ಮ ಮಧುಬನದಲ್ಲಿ ಅಂತರಾಷ್ಟ್ರೀಯ ಮೇಳಗಳು ಎಷ್ಟಾಗುತ್ತವೆ? ಈಗಲೂ ಈ ಮೇಳವೇನು? ಅಂತರಾಷ್ಟ್ರೀಯ ಮೇಳ ಆಗಿದೆಯಲ್ಲವೇ? ದೇಶ-ವಿದೇಶಗಳಿಂದ ಎಲ್ಲಾ ಕಡೆಯವರು ಇದ್ದಾರೆ ಹೊರ ಪ್ರಪಂಚದವರು ಅಂತೂ ಐದು ವರ್ಷಕ್ಕೊಮ್ಮೆ ಅಂತರರಾಷ್ಟ್ರೀಯ ಮೇಳೆಯನ್ನು ಮಾಡಿ ಬಹಳಷ್ಟು ಮಾಡಿಬಿಟ್ಟಿದ್ದೇವೆ ಎಂದು ತಿಳಿಯುತ್ತಾರೆ ಆದರೆ ಮಧುಬನದಲ್ಲಿ ಎಷ್ಟು ಮೇಳಗಳಾಗುತ್ತಿವೆ ನಿಮಗೆ ತಿಳಿದಿದೆಯೇ ಅಂತರಾಷ್ಟ್ರೀಯ ಮೇಳ ಆಗಿಬಿಟ್ಟಿದೆ. ಎಲ್ಲರೂ ಖುಷಿಯಾಗಿದ್ದೀರಾ! ಮಜಾ ಬರುತ್ತದೆಯಲ್ಲವೆ? ಆದರೆ ತಮ್ಮ ಸರದಿಯಲ್ಲಿ ಬರಬೇಕು. ಈಗಂತು ನೋಡಿ, ಹತ್ತು ಸಾವಿರದಲ್ಲಿಯೂ ಟೆಂಟಂತೂ ಸಿಗುತ್ತದೆಯಲ್ಲವೇ? ಕೊನೆಗೆ ಇವೆಲ್ಲಾ ಸಾಧನಗಳೂ ಸಮಾಪ್ತಿ ಆಗಿಬಿಡುತ್ತದೆ ಇಡೀ ಅಬು ಪರ್ವತವನ್ನು ಸ್ವರ್ಣಿಮ ಸ್ಥಾನವನ್ನಾಗಿ ಮಾಡಿಬಿಟ್ಟರೆ ಎಷ್ಟು ಮಂದಿ ಉಳಿದುಕೊಳ್ಳಲು ಸಾಧ್ಯವಾಗುವುದು? ಒಳ್ಳೆಯದು-

**ನಾಲ್ಕೂ ಕಡೆಯಲ್ಲಿರುವ ಹೈಯೆಸ್ಟ್ ಹಾಗೂ ರಿಚೆಸ್ಟ್ ಶ್ರೇಷ್ಠವಾದ ಆತ್ಮರಿಗೆ, ಪ್ರತಿಯೊಂದು ಖಜಾನೆಗಳ ಮಾಲೀಕರು ಸಂಪನ್ನವಾದ ಆತ್ಮರಿಗೆ, ಸದಾ ತಮ್ಮನ್ನು ಎವರೆಡಿಯನ್ನಾಗಿ ಮಾಡಿಕೊಳ್ಳುವಂತಹ ತೀವ್ರ ಪುರುಷಾರ್ಥಿ ಆತ್ಮರಿಗೆ, ಸದಾ ಸಮಯ, ಮಾತು, ಸಂಕಲ್ಪದ ಮೂಲಕ ಶ್ರೇಷ್ಠ ಸಂಪಾದನೆಯ ಖಾತೆಯನ್ನು ಜಮಾ ಮಾಡುವಂತಹ ಅತ್ಯಂತ ಸಮೀಪ ಆತ್ಮರಿಗೆ ಬಾಪ್ ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ,**

ದಾದೀಜಿಯವರೊಂದಿಗೆ:- ಎಲ್ಲರೂ ಸಹಜವಾಗಿ ನಡೆಯುತ್ತಿದ್ದೀರಲ್ಲವೇ? ಮೇಳ ನಡೆಯುತ್ತಿದೆಯೇ ಅಥವಾ ಆಟ ನಡೆಯುತ್ತಿದೆಯೇ? ಸಂತುಷ್ಟತೆಯ ಆಟ ನಡೆಯುತ್ತಿದೆ. ಸಂತುಷ್ಟ ಪಡಿಸುವವರು ಸಂತುಷ್ಟ ಮಾಡುತ್ತಾರೆ ಮತ್ತು ಸಂತುಷ್ಟರಾಗುವವರು ಸಂತುಷ್ಟವಾಗುತ್ತಾರೆ. ಸಂತುಷ್ಟತೆಯ ಈ ಆಟವು ಎಲ್ಲರಿಗೂ ಪ್ರಿಯವೆನಿಸುತ್ತದೆ. ಮತ್ತು ಎಲ್ಲರೂ ಚೆನ್ನಾಗಿದ್ದೀರಾ? (ತಲಹದಿಯಲ್ಲಿ ಎರಡು ಸರದಿಯ ಬಗ್ಗೆ ಚಿಂತನೆ ಮಾಡಿದ್ದೇವೆ) ಮೊದಲು ಪಟ್ಟಿಯನ್ನು ನೋಡಿ, ನಂತರ ಎರಡು ಬಾರಿ ಆದರೂ ಪರವಾಗಿಲ್ಲ. ತಂದೆಯವರು ಮಕ್ಕಳ ಎಲ್ಲಾ ಆಸೆಗಳನೂ ಪೂರ್ಣಗೊಳಿಸುತ್ತಾರೆ. ತಂದೆಯವರು

ಬರುವುದರಲ್ಲಿ ಯಾವುದೇ ಕಷ್ಟವಿಲ್ಲ ಅಲ್ಲವೆ. ಭಲೆ ಮಧುಬನದಲ್ಲಿ. ಪಾಂಡವ ಭವನದಲ್ಲಿಯೂ ಬರಬಹುದು, ತಲಹಟಿಯಲ್ಲಾದರೂ ಬರುತ್ತೇವೆ. ಕಷ್ಟವು ಮಕ್ಕಳಿಗಿದೆ ಆದರೆ ಅದೂ ಕಷ್ಟವೆನಿಸುವುದಿಲ್ಲ. ಯಾವಾಗ ಮಕ್ಕಳು ಸಾಹಸವನ್ನಿಡುತ್ತಾರೆ ಅದರಲ್ಲಿ ನಮಗಾಗಿ ಯಾವುದೇ ಕಷ್ಟವಿಲ್ಲ. ಮನೋರಂಜನೆ ಆಗಿದೆ. ಅಂದಮೇಲೆ ತಂದೆಯವರಂತು ತನುವಿನಲ್ಲಿಯೇ ಬರಬೇಕಲ್ಲವೆ ಅಷ್ಟೇ. ಸಂಗಮದಲ್ಲಿ ಮಾಡಬೇಕಾಗಿರುವುದಾದರೂ ಏನಿದೇ? ಮೇಳ ಮತ್ತು ಖೇಲ. ಸೇವೆಯೂ ಆಟವಾಗಿದೆ. ಮೇಳ ಮಾಡಿ ಹಾಗೂ ಸೇವೆಯ ಆಟವನ್ನಾಡಿರಿ. ಮತ್ತೇನು ಮಾಡಬೇಕು? ತಿನ್ನಿರಿ-ಕುಡಿಯಿರಿ. ಬ್ರಹ್ಮಾ ಭೋಜನವನ್ನು ಸೇವನೆ ಮಾಡಿರಿ. ಒಳ್ಳೆಯದು.

ರಿವೈಸ್ ಕೋರ್ಸ್ 14-12-1994.

***ಸಮಯ, ಸಂಕಲ್ಪ, ವಾಣಿಯ ಮೂಲಕ ಸಂಪಾದನೆಯನ್ನು ಜಮಾ ಮಾಡಿಕೊಳ್ಳಲು ಆಧಾರ- ಮೂರು ಬಿಂದುಗಳನ್ನು ಇಡುವುದು.***

ಬಿಂದು ಇಡುವುದರಿಂದ ಒಂದು ಸೆಕೆಂಡಿನಲ್ಲಿ ಬಹಳಷ್ಟು ಖಜಾನೆಗಳು ಉಳಿತಾಯವಾಗಿ ಬಿಡುತ್ತವೆ. ಗೊತ್ತಿದೆಯಲ್ಲವೇ ಒಂದು ವೇಳೆ ಬಿಂದುವಿನ ಬದಲು ಮತ್ಯಾವುದೇ ಚಿಹ್ನೆಯನ್ನಿಡುತ್ತೀರಿ ಅರ್ಥಾತ್ ಜ್ಞಾನದ ಖಜಾನೆಯೂ ವ್ಯರ್ಥವಾಯಿತು, ಶಕ್ತಿಗಳ ಖಜಾನೆಯು ವ್ಯರ್ಥವಾಯಿತು, ಗುಣಗಳ ಖಜಾನೆ, ಸಂಕಲ್ಪ ಖಜಾನೆಯು ಹೋಯಿತು, ಶ್ವಾಸವು ಸಫಲವಾಗುವ ಬದಲು ಅಸಫಲತೆಯಲ್ಲಿ ಹೋಯಿತು, ಸಮಯವೂ ವ್ಯರ್ಥವಾಯಿತು ಅಂದಮೇಲೆ ಒಂದೆರಡು ಸೆಕೆಂಡ್ ಅಷ್ಟೇ ಹೋಯಿತಲ್ಲವೇ ಎಂದು ಯೋಚಿಸಬಾರದು. ಆದರೆ ಒಂದು ಸೆಕೆಂಡಿನಲ್ಲಿ ಕಳೆದುಕೊಂಡಿದ್ದು ಎಷ್ಟು? ಒಂದು ಸೆಕೆಂಡ್ ಸಹ ಬಹಳ ದೊಡ್ಡದಾಯಿತಲ್ಲವೇ. ಪ್ರತಿ ಸಮಯದಲ್ಲಿ ತಮ್ಮ ಜಮಾದ ಖಾತೆಯನ್ನು ವೃದ್ಧಿ ಮಾಡುತ್ತಾ ಸಾಗಿರಿ. ಎಷ್ಟು ಸಂಪಾದನೆ ಆಯಿತು ಮತ್ತು ಎಷ್ಟು ಕಳೆದುಕೊಂಡೆವು ಎಂದು ಬಾಪ್‌ದಾದಾ ತಮ್ಮ ಜಮಾದ ಖಾತೆಯನ್ನು ಪರಿಶೀಲಿಸುತ್ತಾ ಇರುತ್ತಾರೆ. ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಜ್ಞಾನ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಇಡೀ ಕಲ್ಪದಲ್ಲಿ ಉನ್ನತೋನ್ನತ(ಶ್ರೇಷ್ಠ)ನೂ ಮತ್ತು ಸಿರಿವಂತನೂ ಆಗಿದ್ದೇನೆ.

2. ನಾನು ಈ ಜನ್ಮದಲ್ಲಿ ಜಮಾ ಮಾಡಿರುವ ಖಜಾನೆಯೂ ಇಡೀ ಕಲ್ಪಕ್ಕೆ ಜೊತೆ ಬರುತ್ತದೆ ಎಂಬ ನಿಶ್ಚಯ ಮತ್ತು ನಶೆಯಲ್ಲಿ ಇರುವ ಚಕ್ರವರ್ತಿ.

3. ನಾನು ಏಕೆ, ಹೇಗೆ ಎಂಬ ಪ್ರಶ್ನಾರ್ಥಕಗಳನ್ನು, ಆಶ್ಚರ್ಯಾರ್ಥಕಗಳನ್ನು ಸಮಾಪ್ತಿ ಮಾಡಿ ನಾನು ಬಿಂದು, ತಂದೆಯೂ ಬಿಂದು ಮತ್ತು ಡ್ರಾಮದಲ್ಲಿ ಕಳೆದು ಹೋದ ವಿಷಯಕ್ಕೆ ಬಿಂದುವನ್ನು ಇಟ್ಟಿರುವ ಮಾಸ್ಟರ್ ಜ್ಞಾನ ಸಾಗರನು.

4. ನಾನು ಒಂದೇ ಕ್ಷಣದಲ್ಲಿ ಬಿಂದುವನ್ನು ಇಟ್ಟು ಜ್ಞಾನಖಜಾನೆ, ಗುಣಖಜಾನೆ, ಸಂಕಲ್ಪದ ಖಜಾನೆ, ಶ್ವಾಸದ ಖಜಾನೆ, ಸಮಯದ ಖಜಾನೆಯನ್ನು ಉಳಿತಾಯ ಮಾಡಿರುವ ಸಮರ್ಥ ಸ್ವರೂಪ.

5. ನಾನು ಬಹಳ ಕಾಲದ ವ್ಯರ್ಥ ಸಂಕಲ್ಪಗಳನ್ನು ಸಮಾಪ್ತಿ ಮಾಡಿ ಬಹಳ ಕಾಲದ ವಾರಸತ್ವವನ್ನು ಪಡೆದಿರುವ ಪ್ರಾಪ್ತಿ ಸ್ವರೂಪ.

6. ನಾನು ತಂದೆಯ ಮುಂದೆ ಮಾಡುವ ಪ್ರತಿಯೊಂದು ಪ್ರತೀಜ್ಞೆಯನ್ನು ಪ್ರತ್ಯಕ್ಷದಲ್ಲಿ ತರುವ ಶಕ್ತಿ ಸ್ವರೂಪ.

7. ನಾನು ಸಂಗಮ ಯುಗದಲ್ಲಿ ಪ್ರತಿಯೊಂದು ಕ್ಷಣ ಖಜಾನೆಗಳನ್ನು ಜಮಾ ಮಾಡಿಕೊಳ್ಳುತ್ತಿದ್ದೇನೆ.

8. ನಾನು ವ್ಯರ್ಥ ಮಾತುಗಳನ್ನು ಸಮಾಪ್ತಿ ಮಾಡಿ ಆತ್ಮಿಕ ಭಾವ, ಶುಭ ಭಾವನೆ, ಪ್ರಾಪ್ತಿಯ ಭಾವ, ಅರ್ಥಾತ್ ಸಾರವಿರುವ ಮಾತುಗಳನ್ನೇ ಆಡುವ ಸಮರ್ಥ ಸ್ವರೂಪ.

9. ನಾನು ಜಮಾ ಖಾತೆಯಿಂದ ಆದಿಯಿಂದಲೇ ಲಕ್ಷ್ಮೀನಾರಾಯಣ ರಾಗುವ ಶ್ರೇಷ್ಠ ಪ್ರಾಲಬ್ಧವನ್ನು ಪಡೆದಿದ್ದೇನೆ.

10. ನಾನು ಸಮಯಕ್ಕಿಂತ ಮೊದಲೇ ಪ್ರಾಪ್ತಿಗಳ ಖಾತೆಯನ್ನು ಪೂರ್ತಿಯಾಗಿ ಜಮಾ ಮಾಡಿಕೊಂಡಿರುವ ಸಂಪನ್ನ ಸ್ವರೂಪ.

11. ನಾನು ತಂದೆಯಿಂದ ವಾರಸತ್ವ, ವಿದ್ಯೆ ಮತ್ತು ವರದಾನಗಳ ಬೇಹದ್ ಪ್ರಾಪ್ತಿಯನ್ನು ಪಡೆದಿರುವ ಸರ್ವಪ್ರಾಪ್ತಿ ಸ್ವರೂಪ.

12. ನಾನು ಸಂಪೂರ್ಣ ಸ್ವರೂಪವಾಗಿ ಮಾಯೆ ಮತ್ತು ಪ್ರಕೃತಿಗೆ ಆದೇಶವನ್ನು ಕೊಡುವ ಮಾಸ್ಟರ್ ರಚಯಿತನು.

13. ನಾನು ಸ್ವಯಂ ಅನ್ನು ಎವರ್ ರೆಡಿಯಾಗಿ ತಯಾರು ಮಾಡಿಕೊಳ್ಳುವ ತೀವ್ರಪುರುಷಾರ್ಥಿ.

14. ನಾನು ಜ್ಞಾನವೆಂಬ ದರ್ಪಣದಲ್ಲಿ ಸ್ಪಷ್ಟವಾಗಿ ನನ್ನ ಚಿತ್ರವನ್ನು ನೋಡಿಕೊಳ್ಳುತ್ತಿದ್ದೇನೆ.